

‘ದಯೆಯಿಟ್ಟು, ಮಹಾಸ್ವಾಮಿ! ಈ ದುರದೃಷ್ಟದ ಬಡವನ ಮೇಲೆ ಕರುಣೆ ತೋರಿ. ಮೂರುದಿನದಿಂದ ನಾನು ಏನೂ ತಿಂದಿಲ್ಲ. ರಾತ್ರಿ ಮಲಗುವ ಜಾಗಕ್ಕೆ ಕೊಡಲು ಐದು ಕಾಸು ಸಹಾ ಇಲ್ಲ. ದೇವರಾಣೆ, ಸ್ವಾಮಿ! ಎಂಟು ವರ್ಷ ಹಳ್ಳಿ ಶಾಲೆಯಲ್ಲಿ ಮೇಷ್ಟ್ರಾಗಿ ಕೆಲಸ ಮಾಡುತ್ತಿದ್ದೆ. ಆದರೆ, ಅಲ್ಲಿಯವರ ಒಳಸಂಚಿಗೊಳಗಾಗಿ ಕೆಲಸ ಕಳೆದುಕೊಂಡೆ. ಬಹಿರಂಗ ಆಪಾದನೆಯಿಂದಾಗಿ ನೊಂದಿದ್ದೇನೆ. ಈಗ ಒಂದು ವರ್ಷದಿಂದ ಕೆಲಸವಿಲ್ಲ ನನಗೆ...’

ಬ್ಯಾರಿಸ್ಟರ್ ಸ್ಕ್ವೋರ್ಟ್ಸೋಫ್ ಹೀಗೆ ಬೇಡುತ್ತಿದ್ದವನ ಹರಿದ ಬೂದು–ನೀಲಿ ಬಣ್ಣದ ಮೇಲಂಗಿ, ಮಂಕಾದ, ಗುಳಿಬಿದ್ದ ಕಣ್ಣುಗಳು, ಕೆಂಪು ಚುಕ್ಕೆಗಳಿದ್ದ ಕೆನ್ನೆಗಳು ಮತ್ತು ಮುಖ ನೋಡಿದಾಗ, ಇವನನ್ನು ಎಲ್ಲೋ ನೋಡಿದ ಹಾಗೆನ್ನಿಸಿತು.

ಹಾಗೆ ಬೇಡುತ್ತಿದ್ದವನು ಮಾತನ್ನು ಮುಂದುವರೆಸುತ್ತಾ, ‘ಈಗ ನನಗೆ ಕಲುಗ ಜಿಲ್ಲೆಯಲ್ಲಿ ಕೆಲಸ ಸಿಕ್ಕಿದೆ. ಆದರೆ, ಅಲ್ಲಿಗೆ ಹೋಗಲು ನನ್ನ ಹತ್ತಿರ ದುಡ್ಡಿಲ್ಲ. ದಯೆಯಿಟ್ಟು ಅದಕ್ಕಾಗಿ ಸ್ವಲ್ಪ ಹಣ ಸಹಾಯ ಮಾಡಿ. ಹೀಗೆ ಕೇಳಲು ನನಗೆ ನಾಚಿಕೆಯಾಗುತ್ತಿದೆ. ಆದರೆ, ಸಂದರ್ಭ ನನ್ನನ್ನು ಹೀಗೆ ಕೇಳುವ ಹಾಗೆ ಮಾಡುತ್ತಿದೆ.’

ಸ್ಕ್ವೋರ್ಟ್ಸೋಫ್‌ನ ಕಣ್ಣುಗಳು ಅವನು ಕಾಲಿಗೆ ಹಾಕಿದ್ದ ಮೇಲ್ಜೋಡಿನ ಮೇಲೆ ಬಿತ್ತು. ಅದರ ಒಂದು ಹಿಮ್ಮಡಿ ಎತ್ತರ, ಇನ್ನೊಂದರ ಹಿಮ್ಮಡಿ ಮುರಿದಿತ್ತು. ಅದನ್ನು ನೋಡಿದ ತಕ್ಷಣ ಅವನಿಗೆ ಏನೋ ನೆನಪಾಯಿತು.

‘ಇಲ್ಲಿ ನೋಡು, ನನಗೆ ನೆನಪಿರುವಂತೆ ಮೊನ್ನೆ ನಿನ್ನನ್ನು ಸದೋವಯ ರಸ್ತೆಯಲ್ಲಿ ನೋಡಿದ್ದೆ... ಆದರೆ ಅವತ್ತು ನನಗೆ ನೀನು ಹೇಳಿದ್ದು ಶಾಲೆಯಿಂದ ಹೊರದೂಡಲಾದ ಒಬ್ಬ ವಿದ್ಯಾರ್ಥಿ ಎಂದು, ಹಳ್ಳಿ ಶಾಲೆಯ ಮೇಷ್ಟ್ರು ಎಂದಲ್ಲ, ನಿನಗೆ ನೆನಪಿದೆಯ?’ ಎಂದ.

‘ಇಲ್ಲವಲ್ಲ, ಹಾಗೇನೂ ಇಲ್ಲ’ ಎಂದು ದಿಗ್ಭ್ರಮೆಯಿಂದ ಆ ಭಿಕ್ಷುಕ ಗೊಣಗುತ್ತಾ, ‘ನಾನು ಹಳ್ಳಿಶಾಲೆಯ ಮೇಷ್ಟ್ರು, ಮತ್ತೆ ಬೇಕಾದರೆ ನನ್ನ ಗುರುತಿನ ಪತ್ರ ತೋರಿಸುತ್ತೇನೆ’ ಎಂದ.

‘ಸಾಕು ನಿಲ್ಲಿಸು ಸುಳ್ಳು ಹೇಳುವುದನ್ನು! ನಿನ್ನನ್ನು ವಿದ್ಯಾರ್ಥಿ ಎಂದೇ ಗುರುತಿಸಿಕೊಂಡು, ನಿನ್ನನ್ನು ಏಕೆ ಹೊರ ಹಾಕಿದ್ದಾರೆ ಎಂದೂ ಹೇಳಿದ್ದೆ. ನಿನಗೆ ನೆನಪಿದೆಯೇ!’

ಸ್ಕ್ವೋರ್ಟ್ಸೋಫ್‌ನ ಮುಖ ಸಿಟ್ಟಿನಿಂದ ಕೆಂಪಾಗಿ, ಅಸಹ್ಯಿಸಿಕೊಂಡು, ಆ ಭಿಕ್ಷುಕನಿಂದ ಎರಡು ಹೆಜ್ಜೆ ಹಿಂದಿಟ್ಟ.

‘ಇದು ಸಣ್ಣತನ!’ ಎಂದು ಕೋಪದಿಂದ ಕೂಗಿದ. ‘ನೀನೊಬ್ಬ ಮೋಸಗಾರ! ಪೊಲೀಸಿನವರನ್ನು ನಿನ್ನ ಹತ್ತಿರ ಕಳಿಸುತ್ತೇನೆ, ಹಾಳಾಗಿ ಹೋಗು! ನೀನು ಬಡವ, ಹಸಿದಿದ್ದೀಯ, ಆದರೆ, ಅದು ನಿನಗೆ ಮರ್ಯಾದೆಯಿಲ್ಲದೆ, ನಿರ್ಲಜ್ಜೆಯಿಂದ ಸುಳ್ಳು ಹೇಳುವುದಕ್ಕೆ ಹಕ್ಕು ಕೊಡುವುದಿಲ್ಲ!’

ಆ ಹರಕುಬಟ್ಟೆಯ ನಿರ್ಗತಿಕ ಬಾಗಿಲ ಹಿಡಿಯನ್ನು ಹಿಡಿದುಕೊಂಡು, ಗೊಂದಲಕ್ಕೆ ಬಿದ್ದು, ಕಳ್ಳನಂತೆ, ಮುಂಬಾಗಿಲಿನ ಕಡೆ ನೋಡತೊಡಗಿದ.

ಮೆಲ್ಲಗಿನ ಧ್ವನಿಯಲ್ಲಿ ‘ನಾನು... ನಾನು ಸುಳ್ಳು ಹೇಳುತ್ತಿಲ್ಲ... ನನ್ನ ಗುರುತಿನ ಪತ್ರ ತೋರಿಸಲೇ?’ ಎಂದ.

ಸ್ಕ್ವೋರ್ಟ್ಸೋಫ್ ಸಿಟ್ಟಿನಿಂದ ಮಾತು ಮುಂದುವರೆಸುತ್ತ ಹೇಳಿದ, ‘ನಿನ್ನನ್ನು ಯಾರು ನಂಬುತ್ತಾರೆ? ಸಮಾಜ ಒಬ್ಬ ವಿದ್ಯಾರ್ಥಿಗೆ, ಶಾಲೆಯ ಮೇಷ್ಟ್ರಿಗೆ ತೋರುವ ಸಹಾನುಭೂತಿಯನ್ನು ದುರುಪಯೋಗಪಡಿಸಿಕೊಳ್ಳುವುದು – ಅದು ನೀಚತನ, ಸಣ್ಣತನ ಮತ್ತು ಅಶ್ಲೀಲ ನಡವಳಿಕೆ! ಅಸಹ್ಯ!’

ಸ್ಕ್ವೋರ್ಟ್ಸೋಫ್ ತಾನಾಡುತ್ತಿದ್ದ ಮಾತಿನಿಂದ ಉತ್ಸಾಹಿತನಾಗಿ, ತಾಳ್ಮೆಗೆಟ್ಟು, ಮರುಕ ತೋರದೇ ಆ ಯಾಚಕನನ್ನು ಬೈದ. ನಿರ್ಲಜ್ಜೆಯ ಸುಳ್ಳಿನಿಂದಾಗಿ, ಆ ಹರಕುಬಟ್ಟೆಯ ನಿರ್ಗತಿಕ ಅವನಲ್ಲಿ ಜಿಗುಪ್ಸೆ ಮತ್ತು ಅಸಹ್ಯದ ಭಾವನೆಯನ್ನು ಎಬ್ಬಿಸಿದ್ದ. ಸ್ಕ್ವೋರ್ಟ್ಸೋಫ್ ತನ್ನಲ್ಲಿ ಯಾವುದನ್ನು ಅತ್ಯಮೂಲ್ಯ ಎಂದು ಪ್ರೀತಿಸಿ ಪೋಷಿಸಿದ್ದನೋ ಅದಕ್ಕೆ ಅವಮಾನಿಸಿದಂತಾಯಿತು: ಕರುಣೆ, ಮೃದುಹೃದಯ, ದುರದೃಷ್ಟರಲ್ಲಿ ಅನುಕಂಪ; ಆ ಹರಕುಬಟ್ಟೆಯ ನಿರ್ಗತಿಕ ತನ್ನ ಸುಳ್ಳಿಗಾಗಿ ಈ ಎಲ್ಲವನ್ನು ನಿರೀಕ್ಷಿಸುತ್ತಿದ್ದರಿಂದ, ತಾನು ಯಾವುದನ್ನು ಅತ್ಯಂತ ಪವಿತ್ರ ಕೆಲಸ ಎಂದು ಭಾವಿಸಿ ಬಡವರಿಗಾಗಿ ಸದುಪಯೋಗಿಸುತ್ತಿದ್ದನೋ ಆ ‘ಮೂಲಭೂತ ಭಾವನೆಯ ವಿಷಯ’ವನ್ನು ಇವನ ಸುಳ್ಳು ಯಾಚನೆ ಅಪವಿತ್ರಗೊಳಿಸಿತು ಎನ್ನಿಸಿತು. ಆ ಹರಕುಬಟ್ಟೆಯ ನಿರ್ಗತಿಕ ದೇವರ ಮೇಲೆ ಆಣೆಯಿಟ್ಟು ತನ್ನನ್ನು ತಾನು ಸಮರ್ಥಿಸಿಕೊಳ್ಳಲು ಶುರುಮಾಡಿ, ಆಮೇಲೆ ನಾಚಿ ಸುಮ್ಮನಾಗಿ, ತಲೆಬಾಗಿಸಿ ನಿಂತ.

‘ಸ್ವಾಮಿ!’ ಎಂದು ಕೂಗಿ, ತನ್ನ ಕೈಯನ್ನು ಹೃದಯದ ಮೇಲಿರಿಸಿಕೊಂಡು, ‘ನಿಜವೆಂದರೆ, ನಾನು ಸುಳ್ಳು ಹೇಳುತ್ತಿದ್ದೆ! ಸತ್ಯವಾಗಿ, ನಾನು ವಿದ್ಯಾರ್ಥಿಯೂ ಅಲ್ಲ ಅಥವಾ ಶಾಲೆಯ ಮೇಷ್ಟ್ರೂ ಅಲ್ಲ. ಅದೆಲ್ಲಾ ಕಥೆ ಕಟ್ಟಿದ್ದು. ಮೊದಲು ನಾನು ರಷ್ಯಾದ ಚರ್ಚಿನ ಗಾಯನವೃಂದದಲ್ಲಿ ಹಾಡುಗಾರನಾಗಿದ್ದೆ. ನನ್ನ ಕುಡುಕತನದಿಂದ ಅಲ್ಲಿಂದ ಹೊರಹಾಕಲಾಯಿತು. ಆದರೆ, ನಾನಾದರೂ ಏನು ಮಾಡಲಿ? ನಾನು ಸುಳ್ಳು ಹೇಳದೇ ಜೀವನ ನಡೆಯುವಂತಿಲ್ಲ. ನಾನು ನಿಜ ಹೇಳಿದರೆ ಯಾರೂ ನನಗೆ ಏನೂ ಕೊಡುವುದಿಲ್ಲ. ಸತ್ಯ ಹೇಳಿ, ಒಬ್ಬ ಮನುಷ್ಯ ಹಸಿವೆಯಿಂದಲೋ ಅಥವಾ ಚಳಿಯಿಂದಲೋ ಸಾಯಬೇಕು ಅಷ್ಟೆ. ನೀವು ತರ್ಕಬದ್ಧವಾದದ್ದನ್ನೇ ಹೇಳುತ್ತಿದ್ದೀರಿ ಎಂದು ನನಗೆ ಗೊತ್ತು. ಆದರೆ ನಾನು ಏನು ಮಾಡಲಿ?’

‘ಏನು ಮಾಡುವುದೇ? ನನ್ನನ್ನು ಏನು ಮಾಡಲಿ ಎಂದು ಕೇಳುತ್ತಿದ್ದೀಯಾ?’ ಎಂದು ಹತ್ತಿರ ಬರುತ್ತ ಕೂಗಿದ.

‘ಕೆಲಸ! ನೀನು ಮಾಡಬೇಕಾಗಿದ್ದು ಅದು! ನೀನು ಕೆಲಸ ಮಾಡಬೇಕು!’

‘ಕೆಲಸ... ಅದು ನನಗೂ ಅರ್ಥವಾಗುತ್ತದೆ... ಆದರೆ ನನಗೆ ಕೆಲಸ ಎಲ್ಲಿ ಸಿಗುತ್ತೆ?’

‘ಅಸಂಬದ್ಧ. ನಿನಗೆ ಇನ್ನೂ ಚಿಕ್ಕ ವಯಸ್ಸು, ಆರೋಗ್ಯವಂತ ಮತ್ತು ಶಕ್ತಿವಂತ, ಮತ್ತು ನಿನಗೆ ಬೇಕೆಂದರೆ, ಹುಡುಕಿದರೆ, ಸರಿಯಾದ ಕೆಲಸ ಸಿಕ್ಕೇ ಸಿಗುತ್ತದೆ. ಆದರೆ, ನೀನು ಸೋಮಾರಿ, ಕೆಟ್ಟ ಕುಡುಕ! ನೀನೊಂದು ನಡೆದಾಡುವ ವೋಡ್ಕಾ ಗಡಂಗಿನ ಹಾಗಿದ್ದೀಯ! ಸುಳ್ಳು ಮತ್ತು ಕಳಪೆತನ ನಿನ್ನೊಳಗೆ ಆಳವಾಗಿ ಬೇರುಬಿಟ್ಟಿದೆ. ನಿನಗೆ ಯಾಚಿಸುವುದು ಮತ್ತೆ ಸುಳ್ಳುಹೇಳುವುದು ಎರಡೇ ಸಾಧ್ಯ! ನಿನಗೆ ಕೃಪೆ ಹುಟ್ಟಿ ಎಂದಾದರೂ ಒಮ್ಮೆ ಕೆಲಸ ಮಾಡುವ ಕೀಳು ಮಟ್ಟದ ಯೋಚನೆ ಬಂದರೆ, ನೀನು ಒಂದು ಆಫೀಸಿನಲ್ಲೋ ಅಥವಾ ರಷ್ಯಾದ ಚರ್ಚಿನ ಗಾಯನವೃಂದದಲ್ಲೋ ಅಥವಾ ಬಿಲಿಯರ್ಡ್ ಆಟಗಾರನ ಸಹಾಯಕನಾಗೋ ಕೆಲಸ ಮಾಡುವ ಯೋಚನೆ ಬರುತ್ತದೆ. ಏಕೆಂದರೆ ಹೆಚ್ಚಿನ ಕೆಲಸವಿಲ್ಲದೆ ದುಡ್ಡು ಸಂಪಾದಿಸಬಹುದಲ್ಲ, ಅದಕ್ಕೆ! ಈಗ ಹೇಳು, ದೈಹಿಕ ಶ್ರಮವಿರುವ ಕೆಲಸ ಮಾಡುತ್ತೀಯಾ?